ತಾಳವಾಡಿ, ಮದರಾಸು ಪ್ರಾಂತ್ಯಕ್ಕೇ ಎಂದರೆ ಕೊಯಮತ್ತೂರು ಜಿಲ್ಲೆಗೆ ಸೇರಿದೆ ಎಂದಾಗ 'ಹೌದು, ಹೌದು. ಅದನ್ನು ನಾನು ಬಲ್ಲೆ' ಎಂದರು. 'ವಾಡಿ ಕನ್ನಡ ನಾಡಿನಲ್ಲಿ ಬಹಳ ಕಡೆ ಇದೆ. ತಾಳವಾಡಿ ಹೇಗಾಯಿತೋ?' ಎನ್ನುವ ಪ್ರಶ್ನೆ, ಅವರು ಸಂಶೋಧಕರಷ್ಟೆ. ಹಲವು ವಿಷಯಗಳನ್ನು ಕೇಳಿ ತಿದ್ದಿಕೊಳ್ಳುವ ಹಂಬಲ. ಆತಿಥ್ಯ ಮುಗಿದ ಮೇಲೆ ನಾನು ಹೊರಟು ನಿಂತಾಗ, ನನಗೆ ಸ್ವಲ್ಪ ಪ್ರಸಾದ ಕೊಟ್ಟು ಅವರು ಹೇಳಿದರು.

'ನೋಡಿ, ನಮ್ಮ ಈ ಮನೆಗೆ ಸಮೀಪವಾಗಿ ಒಂದು ಸುಬ್ರಹ್ಮಣ್ಯ ದೇವಸ್ಥಾನ ಇದೆ. ನಿಮಗೆ ಸಮಯ ಇದ್ದಿದ್ದರೆ ಅಲ್ಲಿಗೆ ಹೋಗಿ ಬರಬಹುದಿತ್ತು. ಅದು ಪ್ರಾಚೀನವಾದ ದೇವಸ್ಥಾನ. ಶ್ರೀ ಮಧ್ವಾಚಾರ್ಯರು ಸುಬ್ರಹ್ಮಣ್ಯನ ದರ್ಶನ ಮಾಡಿಹೋಗಲೆಂದೇ ಉಡುಪಿಯಿಂದ ಇಲ್ಲಿಗೆ ಬಂದಿದ್ದರು. ಅದಕ್ಕೆ ನನ್ನ ಬಳಿ ದಾಖಲೆಗಳಿವೆ. ನಾನು ಕಷ್ಟಪಟ್ಟು ಆ ದಿನಗಳನ್ನು ಗುರುತು ಹಾಕಿದ್ದೇನೆ. 1293ನೆಯ ಜುಲೈ ಹದಿನೇಳರಂದು ಅವರು ಇಲ್ಲಿಗೆ ಬಂದಿದ್ದರು. ಆಗ ಒಂದು ಚಂದ್ರ ಗ್ರಹಣ ಆಯಿತು. ಸಮುದ್ರ ಸ್ನಾನಕ್ಕೆಂದು ಶ್ರೀ ಮಧ್ವಾಚಾರ್ಯರು ಈ ನಮ್ಮ ಮನೆಯ ಮುಂದೆಯೇ ಹಾದು ಹೋಗಿದ್ದಾರೆ. ಇದು ಆ ದೇಗುಲದ ಪ್ರಸಾದ. ತಗೊಳ್ಳಿ. ನಿಮಗೆ ನಂಬಿಕೆ ಇದೆಯೋ ಇಲ್ಲವೋ ನನಗೆ ತಿಳಿಯದು. ಆದರೂ ನಿರುದ್ಯೋಗಿ ಎನ್ನುತ್ತೀರಿ. ನಿಮಗೆ ಒಳ್ಳೆಯದಾಗುತ್ತದೆ...'

'ಗೊಲ್ಗೋಥಾ'ದ ಹಾಳೆಗಳ ಮೇಲೆ ಕಣ್ಣಾಡಿಸುತ್ತ ಇರುವಾಗ ಆ ಹಳೆಯ ದಿನಗಳ ನೆನಪುಗಳು; ಗೋವಿಂದ ಪೈಗಳವರ ಆತ್ಮೀಯವಾದ ಆತಿಥ್ಯದ ನೆನಪುಗಳು.

(ಜೂನ್, 1999)

(ಚಿತ್ರಗಳು: ಮಯೂರ ಸಂಗ್ರಹ)


## ನಿಮ್ಮ ನೆಚ್ಚಿನ 'ಮಯೂರ'ವನ್ನು ಅಂಚೆಯ ಮೂಲಕವೂ ತರಿಸಿಕೊಳ್ಳಬಹುದು

ನೀವು ಕಳುಹಿಸುವ ಡಿ.ಡಿ. 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್'– ಹೆಸರಿಗೆ ಇರಬೇಕು. ನೇರವಾಗಿ ಖಾತೆಗೆ ಹಣ ಕಳುಹಿಸುವವರು ಬೆಂಗಳೂರಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಹಾತ್ಮ ಗಾಂಧಿ ರಸ್ತೆ ಶಾಖೆಯ ಖಾತೆ ಸಂಖ್ಯೆ 64018861169ಗೆ ಜಮಾ ಮಾಡಬಹುದು. ಬ್ಯಾಂಕ್ ಐಎಫ್‌ಎಸ್‌ಸಿ ಕೋಡ್ SBIN0040006




ಚಂದಾ ಕಳುಹಿಸುವವರು ತಮ್ಮ ವಿಳಾಸ, ದೂರವಾಣಿ ಸಂಖ್ಯೆಯನ್ನು ಸ್ಪಷ್ಟವಾಗಿ ಬರೆಯಬೇಕು

**ಪ್ರಸರಣ ವಿಭಾಗ**
ದಿ ಪ್ರಿಂಟರ್ಸ್ (ಮೈಸೂರು)
ಪ್ರೈವೇಟ್ ಲಿಮಿಟೆಡ್,
ನಂ 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು– 560 001
**ದೂರವಾಣಿ** : 080–25880199, 219
**ಇ-ಮೇಲ್:**
circulation–blore@deccanherald.co.in



**ಚಂದಾ ವಿವರ (ಅಂಚೆ ವೆಚ್ಚ ಸೇರಿ)**

**ದೇಶದ ಒಳಗೆ**
ವಾರ್ಷಿಕ: **300.00**
(12 ಸಂಚಿಕೆಗಳಿಗೆ)
ಅರ್ಧ ವಾರ್ಷಿಕ **150.00**
(6 ಸಂಚಿಕೆಗಳಿಗೆ)

**ವಿದೇಶಗಳಿಗೆ**
ವಾರ್ಷಿಕ: **1500.00**
(12 ಸಂಚಿಕೆಗಳಿಗೆ)
ಅರ್ಧ ವಾರ್ಷಿಕ **750.00**
(6 ಸಂಚಿಕೆಗಳಿಗೆ)